# ತುಮಕೂರು ವಿಶ್ವವಿದ್ಯಾನಿಲಯ

**ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು– 572 103**

**ದಿನಾಂಕ: 07.09.2021 ರಂದು ಬೆಳಗ್ಗೆ 11:00 ಗಂಟೆಗೆ ನಡೆದ 2020–21ನೇ ಸಾಲಿನ ಐದನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು**

**ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ಸಿದ್ದೇಗೌಡ ವೈ.ಎಸ್., ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಅ. ದೇವೇಗೌಡ, ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ, ಬೆಂಗಳೂರು | ಸದಸ್ಯರು |
| 3. | ಪ್ರೊ. ಹೆಚ್.ಎಸ್. ಶಿವಯೋಗಿ,<br>ಪ್ರಾಂಶುಪಾಲರು, ನವೋದಯ ಪ್ರಥಮ ದರ್ಜೆ ಕಾಲೇಜು, ಶೆಟ್ಟಿಕೆರೆ ರಸ್ತೆ,<br>ಚಿಕ್ಕನಾಯಕನಹಳ್ಳಿ, ತುಮಕೂರು ಜಿಲ್ಲೆ–572214 | ಸದಸ್ಯರು |
| 4. | ಡಾ. ಲೀಲಾವತಿ ಟಿ.ಆರ್<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ತುಮಕೂರು | ಸದಸ್ಯರು |
| 5. | ಡಾ. ಕೆ.ಸಿ ಜಯಸ್ವಾಮಿ<br>ಪ್ರಾಂಶುಪಾಲರು, ಶ್ರೀ ಸಿದ್ದಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಕಾಲೇಜು,<br>ಬಿ.ಹೆಚ್. ರಸ್ತೆ, ತುಮಕೂರು. | ಸದಸ್ಯರು |
| 6. | ಶ್ರೀಮತಿ ಲತಾ ಬಿ.ಎಸ್,<br>ಪ್ರಾಂಶುಪಾಲರು, ಶ್ರೀ ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯ, ಸರಸ್ವತಿ ಪುರಂ, ತುಮಕೂರು. | ಸದಸ್ಯರು |
| 7. | ಡಾ. ಅಬೆಡ್ನಿಗೊ ಸುನಿಲ್<br>ಪ್ರಾಂಶುಪಾಲರು, ಯೂನಿಯನ್ ಕ್ರಿಶ್ಚಿಯನ್ ಕಾಲೇಜು, ಶಿರಾ ಗೇಟ್, ತುಮಕೂರು. | ಸದಸ್ಯರು |
| 8. | ಡಾ. ನಿಂಗಯ್ಯ. ಟಿ<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್, ತುಮಕೂರು ಜಿಲ್ಲೆ. | ಸದಸ್ಯರು |
| 9. | ಕೆ.ಎಸ್. ಕುಮಾರ್,<br>ಪ್ರಾಂಶುಪಾಲರು, ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜು, ತುಮಕೂರು. | ಸದಸ್ಯರು |
| 10. | ಡಾ. ಎನ್. ಜಗದೀಶ್<br>ಪ್ರಾಂಶುಪಾಲರು, ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು,<br>ತಿಪಟೂರು, ತುಮಕೂರು ಜಿಲ್ಲೆ. | ಸದಸ್ಯರು |
| 11. | ಶ್ರೀ ಸಿ.ಎಂ.ಸಿ. ಮಹೇಶ್ | ಸದಸ್ಯರು |
| 12. | ಶ್ರೀ ಎಂ.ಪಿ. ಪ್ರಸನ್ನ | ಸದಸ್ಯರು |
| 13. | ಶ್ರೀ ಅಜಯ್ ಎಂ.ವಿ. | ಸದಸ್ಯರು |
| 14. | ಪ್ರೊ. ಎಲ್.ಪಿ. ರಾಜು., ಪ್ರಾಧ್ಯಾಪಕರು | ಸದಸ್ಯರು |
| 15. | ಪ್ರೊ. ಬಸವರಾಜ ಜಿ., ಪ್ರಾಧ್ಯಾಪಕರು | ಸದಸ್ಯರು |
| 16. | ಡಾ. ಜಿ. ಸುದರ್ಶನರೆಡ್ಡಿ.,<br>ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ ಮತ್ತು ಡೀನರು, ವಾಣಿಜ್ಯ ಮತ್ತು ವ್ಯವಹಾರ<br>ನಿಕಾಯ | ಸದಸ್ಯರು |

| | | |
|---|---|---|
| 17. | ಪ್ರೊ. ಕೇಶವ,<br>ಡೀನರು, ವಿಜ್ಞಾನ ನಿಕಾಯ<br>ಯೋಜನೆ, ಮೇಲ್ವಿಚಾರಣೆಯ ಸಮಿತಿಯ ನಿರ್ದೇಶಕರು, ತುಮಕೂರು ವಿಶ್ವವಿದ್ಯಾನಿಲಯ | ಸದಸ್ಯರು |
| 18. | ಶ್ರೀಮತಿ ರೇಖಾ ಎನ್. | ಸದಸ್ಯರು |
| 19. | ಶ್ರೀ ಕೆ.ಎ. ನಾಗೇಂದ್ರರಾವ್ | ಸದಸ್ಯರು |
| 20. | ಡಾ. ಆರ್. ಡಿ. ಸತೀಶ್ | ಸದಸ್ಯರು |
| 21. | ಪ್ರೊ. ಪಿ. ಪರಮಶಿವಯ್ಯ<br>ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶಕರು, ತುಮಕೂರು ವಿಶ್ವವಿದ್ಯಾನಿಲಯ | ಸದಸ್ಯರು |
| 22. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 23. | ಕುಲಸಚಿವರು | ಸದಸ್ಯ ಕಾರ್ಯದರ್ಶಿ |
| 24. | ಪ್ರೊ. ಕೆ. ನರಹರಿ, ನಿವೃತ್ತ ಪ್ರಾಧ್ಯಾಪಕರು, ಬಿ.ಎಂ.ಎಸ್. ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು | ಸರ್ಕಾರದಿಂದ ವಿಶೇಷ ಆಹ್ವಾನಿತರು |

## ಹಾಜರಾಗದ ಸದಸ್ಯರು

| | | |
|---|---|---|
| 1. | ಶ್ರೀ ಜ್ಯೋತಿಗಣೇಶ್ ಜಿ.ಬಿ ಮಾನ್ಯ ವಿಧಾನಸಭಾ ಸದಸ್ಯರು, ಗಾಂಧೀನಗರ, ತುಮಕೂರು | ಸದಸ್ಯರು |
| 2. | ಶ್ರೀ ಕೆ. ಗೋವಿಂದರಾಜ್, ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ, ಬೆಂಗಳೂರು | ಸದಸ್ಯರು |
| 3. | ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರು ಅಥವಾ ಅವರ ಪ್ರತಿನಿಧಿ<br>ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 4. | ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು | ಸದಸ್ಯರು |
| 5. | ಡಾ. ಟಿ. ವೆಂಕಟಾಚಲಯ್ಯ,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ, ತುಮಕೂರು ಜಿಲ್ಲೆ–572216 | ಸದಸ್ಯರು |
| 6. | ಡಾ. ರಂಗಪ್ಪ ಎಸ್.ಟಿ. | ಸದಸ್ಯರು |
| 7. | ಡಾ. ಪಾಟೀಲ್ ಮಲ್ಲಿಕಾರ್ಜುನ ಬಿ., ಪ್ರಾಧ್ಯಾಪಕರು | ಸದಸ್ಯರು |
| 8. | ಪ್ರೊ. ವಿಲಾಸ್ ಎಂ., ಕಡ್ರೊಳ್ಕರ್, ಪ್ರಾಧ್ಯಾಪಕರು | ಸದಸ್ಯರು |
| 9. | ಡೀನರು, ಕಲಾ ನಿಕಾಯ | ಸದಸ್ಯರು |
| 10. | ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 11. | ಶ್ರೀಮತಿ ಗಾಯತ್ರಿ ಡಿ.ಎಂ. | ಸದಸ್ಯರು |
| 12. | ಶ್ರೀ ದೀರಜ್ ಯಾದವ್ ಎಂ. | ಸದಸ್ಯರು |
| 13. | ಶ್ರೀಮತಿ ಪ್ರೀತಿ | ಸದಸ್ಯರು |

ಪ್ರಸ್ತಾವನೆ:

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ದಿನಾಂಕ: 07.09.2021 ಮಂಗಳವಾರ ಬೆಳಗ್ಗೆ 11:00 ಕ್ಕೆ ನಡೆದ 2020-21ನೇ ಸಾಲಿನ ಐದನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು ಹಾಗೂ ಪ್ರಾಂಶುಪಾಲರ ಕೋಟಾದಲ್ಲಿ ನಾಮನಿರ್ದೇಶಗೊಂಡ ಡಾ. ಎನ್. ಜಗದೀಶ್, ಪ್ರಾಂಶುಪಾಲರು, ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ತಿಪಟೂರುರವರನ್ನು ಸ್ವಾಗತಿಸಿದರು. ಸಭೆಗೆ ಮಾನ್ಯ ಕುಲಸಚಿವರು ಕಾರ್ಯಸೂಚಿಗಳನ್ನು ಮಂಡಿಸಿದರು. ತದನಂತರ ಸಭೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಗಳ ಬಗ್ಗೆ ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

| ಕ್ರ. ಸಂ. | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| ದಿನಾಂಕ: 21.06.2021 ರಂದು ನಡೆದ ನಾಲ್ಕನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳನ್ನು ಯತಾವತ್ತಾಗಿ ದೃಢೀಕರಿಸಲಾಯಿತು. | | | |
| ಶೈಕ್ಷಣಿಕ ವಿಭಾಗ | | | |
| 01 | 2020-21.ಸಾ.ವಿ.ವಿ.ಪ-05 ಶೈ.ವಿ.-01 | ಬಿ.ವೋಕ್ ಕೋರ್ಸ್‌ನ ತಿದ್ದುಪಡಿ ವಿನಿಯಮದ ಕುರಿತು. | ಬಿ.ವೋಕ್ ಕೋರ್ಸಿನ ತಿದ್ದುಪಡಿ ವಿನಿಯಮದ ಕುರಿತು ಚರ್ಚಿಸಿದ ಸಭೆಯು ಸರ್ಕಾರದ ಪತ್ರ ಸಂಖ್ಯೆ ಇಡಿ 22 ಯುಟಿಟಿ 2020 ದಿನಾಂಕ 15.06.2021ರ ಸೂಚನೆಯಂತೆ ಬಿ.ವೋಕ್ ಅಧ್ಯಯನ ಮಂಡಳಿಯು ಯು.ಜಿ.ಸಿ ಮಾರ್ಗಸೂಚಿಗಳಿಗೆ ಅನುಗುಣವಾಗಿ ಪರಿಷ್ಕರಿಸಿ ಸಲ್ಲಿಸಿರುವ ವಿನಿಯಮವನ್ನು ಪರಿಶೀಲಿಸಿ ಅನುಮೋದಿಸಿತು ಹಾಗೂ ವಿನಿಯಮವನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸುವ ಸಂಬಂಧ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 02 | 2020-21.ಸಾ.ವಿ.ವಿ.ಪ-05 ಶೈ.ವಿ.-02 | ನಾಲ್ಕು ವರ್ಷದ ಇಂಟಿಗ್ರೇಟೆಡ್ ಬಿ.ಇಡಿ., ಪದವಿಯ ವಿನಿಯಮವನ್ನು ಅನುಮೋದಿಸುವ ಕುರಿತು. | ನಾಲ್ಕು ವರ್ಷದ ಇಂಟಿಗ್ರೇಟೆಡ್ ಬಿ.ಇಡಿ ಪದವಿಯ ವಿನಿಯಮದ ಕುರಿತು, ಸರ್ಕಾರದ ಪತ್ರ ಸಂಖ್ಯೆ ಇ-ಕಚೇರಿ ಸಂ: ಇಡಿ 06 ಯುಟಿಟಿ 2021 ದಿನಾಂಕ 15.03.2021ರಲ್ಲಿ ತಿಳಿಸಿರುವ ಮಾರ್ಪಾಡುಗಳನ್ನು ಅನುಷ್ಠಾನ ಮಂಡಳಿಯು ಪರಿಷ್ಕರಿಸಿ ಸಲ್ಲಿಸಿರುವ ವಿನಿಯಮದ ಕುರಿತು ಚರ್ಚಿಸಿ ಪರಿಶೀಲಿಸಿದ ಸಭೆಯು ಸದರಿ ವಿನಿಯಮವನ್ನು ಅನುಮೋದಿಸಿತು ಹಾಗೂ ವಿನಿಯಮವನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸುವ ಸಂಬಂಧ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br><br>ಮುಂದುವರೆದು, ಬೋಧನೆ ಮತ್ತು ಕಲಿಕೆಯ ಮೌಲ್ಯಮಾಪನಕ್ಕೆ ಹೆಚ್ಚು ಮಹತ್ವವನ್ನು ವಿನಿಯಮದಲ್ಲಿ ಕೊಡಬೇಕೆಂದು ಶ್ರೀಮತಿ ಲತಾ, ಬಿ.ಎಸ್. ಪ್ರಾಂಶುಪಾಲರು, ಶ್ರೀ ಸಿದ್ದಾರ್ಥ ಶಿಕ್ಷಣ ಮಹಾವಿದ್ಯಾಲಯ, ತುಮಕೂರು ರವರು ಸಭೆಯ ಗಮನಕ್ಕೆ ತಂದರು. |

| | | | |
|---|---|---|---|
| ಸಿಬ್ಬಂದಿ ವಿಭಾಗ | | | |
| 03 | 2020–21.ಸಾ.ವಿ.ವಿ.ಪ–05 ಸಿ.ವಿ.–01 | Statues framed under section 40 (O) of Karnataka State Universities Act-2000 regarding absorption of opted in Teaching and Non-Teaching Staff of erstwhile Government Science College, Tumkur and Government Arts College, Tumkur, into Tumkur University service ಕುರಿತು. | ಸದರಿ ಪರಿನಿಯಮಾವಳಿಯ ಕುರಿತು ಕೂಲಂಕಷವಾಗಿ ಚರ್ಚಿಸಿದ ಸಭೆಯು ಸರ್ಕಾರದ ಪತ್ರಗಳಲ್ಲಿ ಸೂಚಿಸಿರುವಂತೆ ಪರಿಷ್ಕರಿಸಿರುವ ಪರಿನಿಯಮಾವಳಿಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸುವ ಸಂಬಂಧ ಮಾನ್ಯ ಸದಸ್ಯರಾದ ಪ್ರೊ. ಎಲ್.ಪಿ. ರಾಜು ಪ್ರಸ್ತುತ ಪರಿನಿಯಮಕ್ಕೆ ಸಂಬಂಧಿಸಿದಂತೆ ಪ್ರಕರಣವು ನ್ಯಾಯಾಲಯದಲ್ಲಿ ಇರುವುದರಿಂದ ಸರ್ಕಾರಕ್ಕೆ ಪರಿಷ್ಕೃತ ಪರಿನಿಯಮವನ್ನು ಸಲ್ಲಿಸದಿರಲು ಸಭೆಗೆ ಮನವಿ ಮಾಡಿದರು.<br><br>ಸದಸ್ಯರುಗಳಾದ ಪ್ರೊ. ಬಸವರಾಜು ಜಿ ಹಾಗೂ ಪ್ರೊ. ಕೇಶವ ರವರು ಸಹ ಸದರಿ ಪ್ರಕರಣವು ನ್ಯಾಯಾಲಯದಲ್ಲಿ ಇರುವುದರಿಂದ ಸರ್ಕಾರಕ್ಕೆ ಪರಿನಿಯಮವನ್ನು ಸಲ್ಲಿಸದಿರಲು ಸಭೆಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಹಾಗೆಯೇ ಮಾನ್ಯ ವಿದಾನಪರಿಷತ್ ಸದಸ್ಯರಾದ ಶ್ರೀ ಆ. ದೇವೇಗೌಡ ರವರು ಸದರಿ ಪ್ರಕರಣದ ಬಗ್ಗೆ ವಿಧಾನ ಪರಿಷತ್‌ನಲ್ಲಿ ಪೂರಕವಾಗಿ ಚರ್ಚಿಸುವುದಾಗಿ ಸಭೆಗೆ ತಿಳಿಸಿದರು.<br><br>ಅಂತಿಮವಾಗಿ ಪರಿಷ್ಕೃತ ಪರಿನಿಯಮದೊಂದಿಗೆ, ವಿದ್ಯಾವಿಷಯಕ ಪರಿಷತ್ ಸದಸ್ಯರುಗಳ ಅಭಿಪ್ರಾಯವನ್ನು ಸಹ ಸರ್ಕಾರಕ್ಕೆ ಸಲ್ಲಿಸಲು ಸಭೆಯು ತೀರ್ಮಾನಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ | | | |
| 04 | 2020–21.ಸಾ.ವಿ.ವಿ.ಪ–05 ಸಾ&ಅ–01 | 2020-21ನೇ ಸಾಲಿನ ವಾರ್ಷಿಕ ವರದಿ ಕುರಿತು. | 2020–21ನೇ ಸಾಲಿನ ವಾರ್ಷಿಕ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸುವ ಸಂಬಂಧ ಸಿದ್ದಪಡಿಸಿರುವ ವಾರ್ಷಿಕ ವರದಿಯ ಕರಡು ಪ್ರತಿಯನ್ನು ಅನುಮೋದಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

| | | | |
|---|---|---|---|
| | | **ಶೈಕ್ಷಣಿಕ ವಿಭಾಗ** | |
| 05 | 2020-21.ಸಾ.ವಿ.ವಿ.ಪ-05 ಶೈ.ವಿ.-03 | 2021-22ನೇ ಶೈಕ್ಷಣಿಕ ಸಾಲಿನಿಂದ ರಾಷ್ಟ್ರೀಯ ಶಿಕ್ಷಣ ನೀತಿ (NEP) ಯನ್ನು ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಅನುಷ್ಠಾನಗೊಳಿಸುವ ಕುರಿತು ವಿನಿಯಮವನ್ನು ರಚಿಸಿರುವ ಕುರಿತು. | 2021-22ನೇ ಶೈಕ್ಷಣಿಕ ಸಾಲಿನಿಂದ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಳವಡಿಸಿಕೊಂಡಿರುವ ಸಂಬಂಧ ಸಭೆಯು ಮಾನ್ಯ ಕುಲಪತಿಯವರನ್ನು ಶ್ಲಾಘಿಸಿತು. ರಾಷ್ಟ್ರೀಯ ಶಿಕ್ಷಣ ನೀತಿಗೆ ಸಂಬಂಧಿಸಿ ರಚಿಸಿರುವ ವಿನಿಯಮವನ್ನು ಪರಿಶೀಲಿಸಿ ಸಭೆಯು ಅನುಮೋದಿಸಿತು ಹಾಗೂ ವಿನಿಯಮವನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸುವ ಸಂಬಂಧ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 06 | 2020-21.ಸಾ.ವಿ.ವಿ.ಪ-05 ಶೈ.ವಿ.-03 | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ. | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿ, ಅಧಿಸೂಚಿಸಿರುವ ಕ್ರಮವನ್ನು ಸಭೆಯು ಸ್ಥಿರೀಕರಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| | | **ಪಿಹೆಚ್.ಡಿ. ವಿಭಾಗ** | |
| 07 | 2020-21.ಸಾ.ವಿ.ವಿ.ಪ-05 ಪಿಹೆಚ್.ಡಿ..-01 | ಪಿಹೆಚ್.ಡಿ. 2017ರ ವಿನಿಯಮ (ರೆಗುಲೇಷನ್ಸ್) ಪರಿಷ್ಕರಿಸುವ ಕುರಿತು. | ಯು.ಜಿ.ಸಿ. ಪಿಹೆಚ್.ಡಿ. 2016ರ ವಿನಿಯಮದ ನಂತರದ ತಿದ್ದುಪಡಿಗಳನ್ವಯ ತುಮಕೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ 2017ರ ವಿನಿಯಮವನ್ನು ತಿದ್ದುಪಡಿ ಮಾಡಿ ಸಲ್ಲಿಸಿರುವುದನ್ನು ಸಭೆಯು ಅನುಮೋದಿಸಿ, UGC 2018 Regulations ನಲ್ಲಿರುವಂತೆ ಕಂಡಿಕೆ 1 ರಿಂದ 2ರ ತನಕ ಸೇರ್ಪಡೆಗೊಳಿಸಿ, ಸರ್ಕಾರಕ್ಕೆ ಸಲ್ಲಿಸಲು ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |

ಮಾನ್ಯ ಕುಲಸಚಿವರು

ಮಾನ್ಯ ಕುಲಪತಿಗಳು